

# ಚೆಂದದ ಚೆಂಡು ಹೂವು

ಆಕರ್ಷಕ ಬಣ್ಣ, ರೂಪದಿಂದ ಪುಷ್ಪಪ್ರಿಯರನ್ನು ಸೆಳೆಯುವ ಚೆಂಡು ಹೂವು ಅಂದಕ್ಕೆ, ಅಲಂಕಾರಕ್ಕೆ, ಆರೋಗ್ಯಕ್ಕೆ ಉಪಯುಕ್ತವಾಗಿದೆ.

■ ಯು. ವೇಣೂರು

ಚೆಂಡು ಹೂವು ನೋಡಲು ಚಂದ, ಆರೋಗ್ಯಕ್ಕೆ ಪೂರಕ, ಪೂಜೆಗೆ, ಹಬ್ಬ ಹರಿದಿನಗಳಲ್ಲಿ ಅಲಂಕಾರಕ್ಕೆ ಸೂಕ್ತ. ಮೆಕ್ಸಿಕೊ ಮೂಲದ ಚೆಂಡು ಹೂವು, ಗೊಂಡೆ ಹೂವು, ಚೆಂಡು ಮಲ್ಲಿಗೆ, ಸೀಮೆ ಸೇವಂತಿಗೆ ಹೂವು ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುತ್ತಿದೆ. ಈ ಹೂವನ್ನು ಆಂಗ್ಲ ಭಾಷೆಯಲ್ಲಿ ಮಾರಿಗೋಲ್ಡ್, ತೆಲುಗಿನಲ್ಲಿ ಬಂಟಿ, ಬಂಟಿಚೆಟ್ಟು, ತಮಿಳಿನಲ್ಲಿ ತುರುಕ್ಕಸಮಂಡಿ, ಸಂಸ್ಕೃತದಲ್ಲಿ ಸ್ಥೂಲಪುಷ್ಪ, ಜಂಡುಗ ಹಾಗೂ ಗಂದುಗ, ಹಿಂದಿಯಲ್ಲಿ ಗೆಂಡೆ, ಗಿಟ್ಟೇರ ಎಂದು ಕರೆಯಲಾಗುತ್ತದೆ.

ಚೆಂಡು ಹೂವಿನ ಗಿಡದ ವೈಜ್ಞಾನಿಕ ಹೆಸರು ಟಗೆಟಿಸ್ ಇರೆಕ್ಟ (**Tagetes erecta**) ಆಗಿದ್ದು, ಆಸ್ಟಿರೇಸಿ (**Asteraceae**) ಸಸ್ಯ ಕುಟುಂಬಕ್ಕೆ ಸೇರಿದೆ. ಒತ್ತೊತ್ತಾಗಿರುವ ದಳಗಳನ್ನು ಹೊಂದಿ ನೋಡಲು ಆಕರ್ಷಕವಾಗಿರುವ ಚೆಂಡು ಹೂವು ಕೇಸರಿ, ಹಳದಿ ಬಣ್ಣಗಳಲ್ಲಿ ಲಭ್ಯ. ಇದರದ್ದೇ ಇನ್ನೊಂದು ಪ್ರಭೇದದ ಹೂವು ಕೆಂಪುಮಿಶ್ರಿತ ಬಣ್ಣದಿಂದಲೂ ಕೂಡಿದೆ. ಈ ಗಿಡವು ಪೊದೆಯಂತೆ ಬೆಳೆಯುತ್ತದೆ. ಎಲೆಗಳೂ ಸುವಾಸನೆಯಿಂದ ಕೂಡಿರುತ್ತವೆ. ಎಲೆಗಳಲ್ಲಿ ಸೀಳು ಇರುವುದರಿಂದ ಇವು ಸಂಯುಕ್ತ ಎಲೆಗಳಂತೆ ಕಾಣುತ್ತವೆ. ಹೂವಿನ ತೊಟ್ಟಿನ ಭಾಗದಲ್ಲಿ ಬೀಜಗಳಿರುತ್ತವೆ. ಇದರಿಂದ ಸಸ್ಯವೃದ್ಧಿಯಾಗುತ್ತದೆ.

ಚೆಂಡು ಹೂವನ್ನು ಹಳ್ಳಿಗಳಲ್ಲಿ ಹಿತ್ತಲಿನಲ್ಲಿ ಧಾರಾಳವಾಗಿ ಬೆಳೆಯುತ್ತಾರೆ. ಮನೆಯ ಕೈತೋಟದಲ್ಲಿ ಅರಳಿ ನಿಂತ ಹೂವುಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಅಲ್ಲದೆ ಭಾರತದಲ್ಲಿ ಮದುವೆಗಳು ಮತ್ತು ಹಬ್ಬಗಳಲ್ಲಿ ಈ ಹೂವು ಬಹಳ ಜನಪ್ರಿಯ. ಆಧ್ಯಾತ್ಮದ ಪ್ರಕಾರ ಈ ಹೂವುಗಳು ಸೂರ್ಯನನ್ನು ಪ್ರತಿನಿಧಿಸುತ್ತವೆ ಮತ್ತು ಸಕಾರಾತ್ಮಕ ಶಕ್ತಿಯನ್ನು ಸಂಕೇತಿಸುತ್ತವೆ ಎನ್ನುತ್ತಾರೆ ತಜ್ಞರು.

## ಆರೋಗ್ಯಕ್ಕೂ ಉಪಯುಕ್ತ

ಚೆಂಡು ಹೂವು ಆರೋಗ್ಯಕರ ಅಂಶಗಳನ್ನು ಮಡಿಲಲ್ಲಿ ತುಂಬಿಕೊಂಡಿದೆ. ಇದರ ಎಲೆ, ಕಾಂಡ, ಬೇರು ಎಲ್ಲವೂ ಔಷಧೀಯ ಗುಣಗಳಿಂದ ಕೂಡಿವೆ.

‘ಇದರ ಹೂವು ಪಿತ್ತ ಮತ್ತು ಕಫ ದೋಷವನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ. ಇದು ಕಹಿ ಮತ್ತು ಚೊಗರು ರುಚಿಯನ್ನು ಹೊಂದಿದ್ದು, ಚೆಂಡು ಹೂವಿನ ಎಲೆಯ ಪೇಸ್ಟ್ ಸಂಧಿವಾತ, ಪಕ್ಕೆನೋವು, ಸ್ನಾಯುಗಳ ಸೆಳೆತ ನಿವಾರಣೆಗೆ ರಾಮಬಾಣ. ಉರಿಯೂತ ನಿವಾರಕವಾಗಿಯೂ ಇದನ್ನು ಬಳಸಲಾಗುತ್ತದೆ. ಹೂವಿನ ರಸ ಕುಡಿಯುವುದರಿಂದ ರಕ್ತ ಶುದ್ಧಿಯಾಗುತ್ತದೆ’ ಎಂದು ಮಾಹಿತಿ ನೀಡುತ್ತಾರೆ ಬೆಂಗಳೂರಿನ ಆಯುರ್ವೇದ ತಜ್ಞೆ ಡಾ. ವಸುಂಧರಾ ಭೂಪತಿ.

ಉದ್ಯಾನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುವ ಈ ಹೂವನ್ನು ಹಾರಕ್ಕಾಗಿ, ವೇದಿಕೆ ಅಲಂಕರಣ, ಬಣ್ಣ ತಯಾರಿಕೆ ಮತ್ತಿತರ ಉದ್ದೇಶಗಳಿಗೆ ಕೂಡ ಬಳಸುತ್ತಾರೆ. ವಾಣಿಜ್ಯ ಬೆಳೆಯಾಗಿ ಇದನ್ನು ಬೆಳೆದು ರೈತರು ಲಾಭ ಪಡೆಯುತ್ತಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ ಹಾಗೂ ತಮಿಳುನಾಡುಗಳಲ್ಲಿ ಈ ಹೂವನ್ನು ಹೇರಳವಾಗಿ ಬೆಳೆಯಲಾಗುತ್ತದೆ.

ಸೆಪ್ಟೆಂಬರ್‌ನಿಂದ ಜನವರಿವರೆಗೂ ಇದರ ಗಿಡ ಹೇರಳವಾಗಿ ಹೂವು ಬಿಡುತ್ತದೆ. ದಸರಾ, ದೀಪಾವಳಿ ಹಬ್ಬಗಳಲ್ಲಿ ಚೆಂಡು ಹೂವಿನ ಮಾರಾಟ ಜೋರು. ನಗರ ಪ್ರದೇಶದ ಮನೆಗಳಲ್ಲಿ ಕುಂಡದಲ್ಲಿಯೂ ಚೆಂಡು ಹೂವು ಬೆಳೆಯಬಹುದು. ■

